# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ಹುಬ್ಬಳ್ಳಿಯಲ್ಲಿ ಬ್ರೌನ್ ಫೀಲ್ಡ್ ಇಎಸ್‌ಡಿಎಂ ಕ್ಲಸ್ಟರ್ ಸ್ಥಾಪನೆ**

**ಓದಲಾಗಿದೆ:** 1. ದಿನಾಂಕ 09.05.2017 ಸಂಖ್ಯೆ ಐಟಿಡಿ 77 ಎಡಿಎಂ 2017ರ ಸರ್ಕಾರಿ ಆದೇಶ.

2. ದಿನಾಂಕ:03.06.2017ರ ಸಂಖ್ಯೆ: ಐಟಿಬಿಟಿ/ಆಡಳಿತ/34/ಆಯವ್ಯಯ /119 ಮಾತಂ ಜೈತಂ ಇಲಾಖೆಯ ನಿರ್ದೇಶಕರ ಪತ್ರ .

**ಪ್ರಸ್ತಾವನೆ:**

ಹುಬ್ಬಳ್ಳಿಯಲ್ಲಿ ಬ್ರೌನ್ ಫೀಲ್ಡ್ ಇಎಸ್‌ಡಿಎಂ ಕ್ಲಸ್ಟರ್ ಸ್ಥಾಪಿಸಲಾಗುವುದೆಂದು 2017-18ನೇ ಸಾಲಿನಲ್ಲಿ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದ್ದು, ಈ ದಿಶೆಯಲ್ಲಿ, ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಇಎಸ್‌ಡಿಎಂ ವಲಯಕ್ಕಾಗಿ ಬ್ರೌನ್‌ಫೀಲ್ಡ್ ಇಎಸ್‌ಡಿಎಂ ಕ್ಲಸ್ಟರ್ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರವನ್ನು ಕಲ್ಪಿಸುವ ಸಲುವಾಗಿ ದೇಶ್‌ಪಾಂಡೆ ಫೌಂಡೇಷನ್‌ರವರು ಹುಬ್ಬಳ್ಳಿಯಲ್ಲಿರುವ ಸದರಿ ಫೌಂಡೇಷನ್ನಿಗೆ ಸೇರಿದ ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್ ಸೌಲಭ್ಯದಿಂದ 5,000 ಚ.ಅಡಿ ಜಾಗವನ್ನು ಉಚಿತವಾಗಿ ನೀಡಲು ಮುಂದಾಗಿದ್ದಾರೆ. ಇಂಡಿಯಾ ಎಲೆಕ್ಟ್ರಾನಿಕ್ಸ್ ಅಂಡ್ ಸೆಮಿಕಂಡಕ್ಟರ್ ಅಸೋಸಿಯೇಷನ್ (IESA)ರವರು 75ಕ್ಕೂ ಹೆಚ್ಚು ವರ್ಕ್‌ಸ್ಟೇಷನ್‌ಗಳ, ಜೊತೆಗೆ ಪರೀಕ್ಷಣಾ ಸಲಕರಣೆ, ಉಪಕರಣಗಳಿರುವ ಸುಸಜ್ಜಿತ ಲ್ಯಾಬ್ ವ್ಯವಸ್ಥೆಯನ್ನು ಸಹ ಹೊಂದಲಿರುವ ಸದರಿ ಸೌಲಭ್ಯವನ್ನು ಚಾಲನೆ ಮಾಡಿ ನಿರ್ವಹಿಸಲು ಮುಂದೆ ಬಂದಿದ್ದಾರೆ ಎಂದು ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ನಿರ್ದೇಶಕರು ತಿಳಿಸಿರುತ್ತಾರೆ.

3. ವಿಡಿಯೋ ಕಾನ್ಫರೆನ್ಸ್ ಸೌಲಭ್ಯ, ಕೆಫೆಟೇರಿಯಾ, ಶೌಚಾಲಯ ಮುಂತಾದವುಗಳನ್ನು ಒದಗಿಸಲು ಸಹ ದೇಶ್‌ಪಾಂಡೆ ಫೌಂಡೇಷನ್ ಸಮ್ಮತಿ ತೋರಿದೆ. ಒಳಾಂಗಣ ಸಜ್ಜಿಕೆ, ಅಂತರ್ಜಾಲ, ಸರ್ವರ್‌ಗಳು, ಉಪಕರಣಗಳು, ವೈ-ಫೈ, power backup, ಹವಾನಿಯಂತ್ರಣ, ಗಣಕಯಂತ್ರಗಳು, ಸಂಪರ್ಕಜಾಲಗಳು, ಪರೀಕ್ಷಣಾ ಲ್ಯಾಬ್ ಉಪಕರಣಗಳು, ಮುಂತಾದ ಅಗತ್ಯ ಮೂಲಸೌಕರ್ಯಗಳು ಒದಗಿಸಲ್ಪಟ್ಟ ನಂತರ ಸದರಿ ಸೌಲಭ್ಯವು ಸೆಪ್ಟೆಂಬರ್, 2017ರೊಳಗಾಗಿ ಕಾರ್ಯಾಚರಣೆಗೆ ಸಜ್ಜಾಗಲಿದೆ. ಇದಕ್ಕಾಗಿ ಬಂಡವಾಳ ವೆಚ್ಚ ಅಂದಾಜು ರೂ.340.00ಲಕ್ಷಗಳಾಗಿದ್ದು, ಮೊದಲ ವರ್ಷದ ಚಾಲನಾ ವೆಚ್ಚವು ರೂ.60.00 ಲಕ್ಷಗಳಾಗುವುದೆಂದು ಅಂದಾಜಿಸಲಾಗಿದೆ.

4. ಸದರಿ ಬ್ರೌನ್‌ಫೀಲ್ಡ್ ಇಎಸ್‌ಡಿಎಂ ಕ್ಲಸ್ಟರ್ ಮತ್ತು ಸಾಮಾನ್ಯ ಸೌಲಭ್ಯ ಕೇಂದ್ರದ ಸ್ಥಾಪನೆಯ ಉದ್ದೇಶಕ್ಕಾಗಿ 2017-18ನೇ ಸಾಲಿನಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಗೆ ಹಂಚಿಕೆ ಮಾಡಲಾಗಿರುವ ಆಯವ್ಯಯದಲ್ಲಿ ರೂ.4.00 ಕೋಟಿಗಳ ಮೊತ್ತವನ್ನು ನಿಗದಿಪಡಿಸಲಾಗಿದೆ.

5. ಹುಬ್ಬಳ್ಳಿಯು ಉತ್ತರ ಕರ್ನಾಟಕದ 2ನೇ ಹಂತದ ಪ್ರಮುಖ ವಾಣಿಜ್ಯ ನಗರವಾಗಿದ್ದು, ಉತ್ತರ ಕರ್ನಾಟಕ ಪ್ರದೇಶದಲ್ಲಿ ನವೀನ ಪರಿಕಲ್ಪನೆಗಳನ್ನು ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವ ರಾಜ್ಯ ಸರ್ಕಾರದ ಉದ್ದೇಶ, ಇಎಸ್‌ಡಿಎಂ ಸ್ಟಾರ್ಟ್‌ಅಪ್‌ಗಳನ್ನು ಈ ಪ್ರದೇಶಗಳಲ್ಲಿ ಪ್ರೋತ್ಸಾಹಿಸುವ ಕಾರ್ಯವು ಸಮರ್ಪಕವಾಗಿ ಹೊಂದುತ್ತದೆ.

--2

6. ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡ ಆದೇಶ.

**<u>ಸರ್ಕಾರಿ ಆದೇಶ ಸಂಖ್ಯೆ.: ಐಟಿಡಿ 77 ಎಡಿಎಂ 2017 ಬೆಂಗಳೂರು, ದಿನಾಂಕ: 04.07.2017</u>**

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, 2017-18ನೇ ಸಾಲಿನಿಂದ ಹುಬ್ಬಳ್ಳಿಯ ದೇಶ್‌ಪಾಂಡೆ ಫೌಂಡೇಷನ್ನಿನ ಸ್ಯಾಂಡ್‌ಬಾಕ್ಸ್ ಸ್ಟಾರ್ಟ್‌ಅಪ್ಸ್ ಸೌಲಭ್ಯದಲ್ಲಿ ಇಎಸ್‌ಡಿಎಂ ಬ್ರೌನ್‌ಫೀಲ್ಡ್ ಕ್ಲಸ್ಟರ್ ಜೊತೆ ಸಾಮಾನ್ಯ ಸೌಲಭ್ಯ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ.

2. ಸದರಿ ಸೌಲಭ್ಯದ ಬಂಡವಾಳ ವೆಚ್ಚವಾಗಿ ರೂ.340.00 ಲಕ್ಷಗಳ ಅಂದಾಜು ವೆಚ್ಚವನ್ನು ಹಾಗೂ ಮೊದಲ ವರ್ಷದಲ್ಲಿ ಚಾಲನಾ ವೆಚ್ಚಕ್ಕಾಗಿ ರೂ.60.00 ಲಕ್ಷಗಳನ್ನು, ಇಎಸ್‌ಡಿಎಂ ವಲಯವನ್ನು ಪ್ರೋತ್ಸಾಹಿಸುವ ಸಲುವಾಗಿ ಕೆಬಿಟ್ಸ್ ಸಂಸ್ಥೆಗೆ ನೀಡಲಾಗುವ ಅನುದಾನದಿಂದ ಭರಿಸತಕ್ಕದ್ದು.

3. ಸದರಿ ಸೌಲಭ್ಯವನ್ನು ಸ್ಥಾಪಿಸಿ ಚಾಲನೆ ಮಾಡಲು IESA ಮತ್ತು ದೇಶ್‌ಪಾಂಡೆ ಫೌಂಡೇಷನ್‌ಗಳೊಡನೆ ಕೆಬಿಟ್ಸ್ ಸಂಸ್ಥೆಯ ಪ್ರತಿಯೊಬ್ಬ ಪಾಲುದಾರರ ನಿರ್ದಿಷ್ಟ ಪಾತ್ರಗಳನ್ನು, ಹೊಣೆಗಾರಿಕೆಗಳನ್ನು ನಿಗದಿಪಡಿಸಿ ಒಪ್ಪಂದಕ್ಕೆ (MoA) ಬರತಕ್ಕದ್ದು. ಸದರಿ ಸೌಲಭ್ಯದಿಂದ ಉತ್ಪತ್ತಿಯಾಗುವ ಆದಾಯದಿಂದ Pay-and-Use ಆಧಾರದ ಮೇಲೆ ಎರಡನೇ ವರ್ಷ, ತದನಂತರದ ವರ್ಷಗಳಲ್ಲಿ ಚಾಲನಾ ವೆಚ್ಚವನ್ನು IESA ಭರಿಸತಕ್ಕದ್ದು. ಸದರಿ ಸೌಲಭ್ಯವನ್ನು ಯಶಸ್ವಿಯಾಗಿ ನಡೆಸಿ ನಿರ್ವಹಿಸಲು ಸಕ್ರಿಯವಾಗಿ IESA ಯೊಡನೆ ಕೆಬಿಟ್ಸ್ ಸಂಸ್ಥೆಯು ತೊಡಗಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

4/7

(ಸಿದ್ದಲಿಂಗಪ್ಪ ಹ. ತಳವಾರ)
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಗೆ:
ಸಂಕಲನಕಾರರು, ಕರ್ನಾಟಕ ವಾರ್ತಾಪತ್ರದ ವಿಶೇಷ ಗೆಜೆಟ್‌ನಲ್ಲಿ ಪ್ರಕಟಣೆಗಾಗಿ ಹಾಗೂ 200 ಪ್ರತಿಗಳ ಸರಬರಾಜು ಕೋರಿ.

**<u>ಪ್ರತಿಗಳು:</u>**
1) ಪ್ರಧಾನ ಲೇಖಪಾಲರು, ಕರ್ನಾಟಕ (ಎ&ಎ), ಬೆಂಗಳೂರು.
2) ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ
3) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು.
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ.
5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಯೋಜನಾ ಇಲಾಖೆ.
6) ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್, ಬೆಂಗಳೂರು.
7) ನಿರ್ದೇಶಕರು- ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಬೆಂಗಳೂರು.
8) ಅಧ್ಯಕ್ಷರು, IESA, ಬೆಂಗಳೂರು (ಕೆಬಿಟ್ಸ್ ಸಂಸ್ಥೆಯ ಮುಖಾಂತರ)
9) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು
10) ಮಾನ್ಯ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ
11) ರಕ್ಷಾ ಕಡತ/ ಬಿಡಿ ಪ್ರತಿಗಳು